ನೋಟಿಸ್.

ಹಾಸನ ಡಿಸ್ಟ್ರಿಕ್ಟ್ ಪಸಾರೆ ಬಾಬಿನ್ ಫಸಲನ್ನು ಅರಸೀಕೆರೆ, ಹಾಸನ ಮತ್ತು ಆರಕಲ್‌ಗೂಡು ಈ ತಿಪ್ಪೋಗ್ರಳ್ಳಿ 1907ನೆ ಜೂ ತಾರೀಖು 10, 12, 15ರಲ್ಲಿ ಹರಾಜು ಮಾಡಿಸುತ್ತೇವೆಂಬ ವಿಷಯ ತಪಕೀಲಾಗಿ 1907ನೆ ಮೇ 16ನೆ ತಾರೀಖು ಮೈಸೂರು ಗೆಜೆಟ್ 11ನೆ ಪಾರ್ಟ್ 201ನೆ ಪುಟ್‌ನಲ್ಲಿ 10—5—07ನೆ ಮೇರ್ಕುಂ ಇಸ್ತಿಹಾರ್ ಮೂಲಕ ಪ್ರಕಟ ಪಡಿಸಿ ಇದೆ. ಎಲ್ಲರಿಗೂ ತಿಳಿಯ ತಕ್ಕದ್ದು.

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಎಕ್ಸೈಜ್ ಇಲಾಖೆ.

1907—1908ನೆ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ್ 4130, ತಾರೀಖು 10ನೆ ಮಾರ್ಚ್ 1907.

1. ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1907ನೆ ಇಸವಿ ಜುಲೈ ಗುರ್ಸ್ ತಾರೀಖಿಗೆ ಪ್ರಾರಂಭವಾಗಿ 1908ನೆ ಇಸವಿ ಜೂ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರಿ ಮಾಡತಕ್ಕೆ ಹಕ್ಕನ್ನು ಇದರಡಿಯಲ್ಲಿ ಕಂಡ ತಾಲ್ಲೂಕು ಹೆಡ್ ಕ್ವಾರ್ಟರ್ ಯಾ ಇತರ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್‌ಗಳು ಯಾ ರೆವಿನ್ಯೂ ಅಸಿಸ್ಟೆಂಟ್ ಕಮ್ಮಿಷನರ್‌ಗಳು ಯಾ ಎಕ್ಸೈಸ್ ಇಲಾಖೆಯ ಡಿವಿಜ್ ಆಫಿಸರರು ಯಾ ಡೆಪ್ಯುಟಿ ಕಮ್ಮಿಷನರವರಿಂದ ಈ ಕೆಲಸಕ್ಕಾಗಿ ನೇಮಿಸಲ್ಪಡಬಹುದಾದ ಇತರ ಅಧಿಕಾರಿಗಳು ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಮುಂದೆ ನಮೂದು ಮಾಡಿರುವ ಪರತ್ತುಗಳನ್ನನುಸರಿಸಿ ಹರಾಜ್ ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರಿ ತಾರೀಖುಗಳಲ್ಲಿ ಪೂರೈಸದ್ದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. (ರಜಾ ದಿನಗಳು ಹೊರತಾಗಿ).

2. (a) ಕೋಲಾರದ ಚಿನ್ನದ ಗಣಿಗಳ ಅಂಗಡಿಗಳಿಗೆ 60 ರೂಪಾಯಿಗಳನ್ನು ಮೈಸೂರು, ಬೆಂಗಳೂರು ಪಟ್ಟಣಗಳ ಅಂಗಡಿಗಳಿಗೆ 25 ರೂಪಾಯಿಗಳನ್ನು ಇತರ ಸ್ಥಳಗಳಲ್ಲಿನ ಅಂಗಡಿಗಳಿಗೆ 10 ರೂಪಾಯಿಗಳನ್ನು ಅಥವಾ ಹರಾಜ್ ಮಾಡತಕ್ಕ ಆಫಿಸರರು ಗೊತ್ತು ಮಾಡುವ ಇತರ ನ್ಯಾಯವಾದ ಮೊಬಲಗನ್ನು ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ತೇವಣಾತಿ ಇಡತಕ್ಕದ್ದು. ಹರಾಜು ತಾರೀಖಿಗೆ ಮುಂಚೆ 3 ದಿವಸಗಳೊಳಗಾಗಿ ಸದರೀ ಮೊಬಲಗನ್ನು ಸವಾಲ್ದಾರನು ಕೊಟ್ಟರ್ಜು ತೆಗದುಕೊಳ್ಳಲ್ಪಡುತ್ತದೆ. ಆದರೆ ಸರ್ಕಾರದವರು ಅಂಥಾ ಆರಂಭದ ತೇವಣಾತಿ ಮೊಬಲಗನ್ನು ಯಾವಾಗ ಬೇಕಾದರೂ ಅವಶ್ಯಕವಿಲ್ಲವೆಂದು ಬಿಟ್ಟುಬಿಡಬಹುದು. ನಾಮಂಜೂರಾದ ಸವಾಲ್ದಾರರ ತೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯೆಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಹರಾಜ್ ಪೂರೈಸಿದ ಕೂಡ್ಲೆ ವಾಪಸ್ ಮಾಡಲ್ಪಡುತ್ತವೆ. ಸದರೀ ಅಂಗಡಿ ಯಾ ಅಂಗಡಿಗಳ ಸಮುದಾಯಗಳಿಗೆ ಯಾರ ಚಡ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮ್ಮಿಷನರವರ ಕೃಮವಾದ ಮಂಜೂರಾತಿಗೆ ಬಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತತೋರುವಂತೆ ಕಾರಣಗಳನ್ನು ಉದಹರಿಸದೆ ಮಂಜೂರು ಅಥವಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಅಂಥಾ ಕೃಮವಾದ ಮಂಜೂರಾತಿಯು ಗವರ್ನ್‌ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದಾಗಿಯೂ ಡೆಪ್ಯುಟಿ ಕಮ್ಮಿಷನರವರು ಖುದ್ದಾಗಿಯೇ ಆಗಲಿ ಯಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ಹರಾಜು ನಡಿಸಿದ್ದರೂ ಅವಶ್ಯಕವಾಗಿರುವದು. ದರಖಾಸ್ತು ಮಾಡಲು ಇಚ್ಛಿಸುವವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕೃಮವಾಗಿ ಅಪ್ಪಣೆ ಪಡೆದಿರುವ ಅವರ ತರಫ್ ಮುಖ್ತಾರೀಕರನ್ನು ಕಳುಹಿಸಬೇಕು. ಬಂದೊಂದು ಅಂಗಡಿಗೆ ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲ್ ಬಾರದೇಹೋದಲ್ಲಿ ಹರಾಜು ನಡಿಸತಕ್ಕ ಆಫಿಸರರು ಎಕ್ಸೈಜ್ ಡಿವಿಜ್ ಆಫಿಸರರು ಹಾಜರಿದ್ದಲ್ಲಿ ಅವರ ಅಭಿಪ್ರಾಯವನ್ನು ತಿಳಿದು ಬಂದಕ್ಕಿಂತಲೂ ಹೆಚ್ಚಾಗಿ ಅಂದರೆ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ತಾಲ್ಲೂಕುಗಳಲ್ಲಿಯೂ ಕೋಲಾರದ ಚಿನ್ನದ ಗಣಿಯಲ್ಲಿಯೂ ಎರಡಕ್ಕಿಂತ ಹೆಚ್ಚಾಗದಂತೆಯೂ ಇತರ ಸ್ಥಳಗಳಲ್ಲಿ ಆರಕ್ಕಿಂತ ಹೆಚ್ಚಾಗದಂತೆಯೂ ಅಂಗಡಿಗಳನ್ನು ಸೇರಿಸಿ ಹರಾಜು ಮಾಡಿಸಬಹುದು. ಅಥವಾ ಅವಶ್ಯಕವಾಗಿದ್ದಲ್ಲಿ ಸವಾಲಿಲ್ಲದೇ ಇರುವ ಅಂಗಡಿಗಳನ್ನು ಮುಂದೆ ವಿಲೇವಾರಿ ಮಾಡಲು ಅವಾನತ್ತು ಇಡಬಹುದು. ಡೆಪ್ಯುಟಿ ಕಮ್ಮಿಷನರವರ ಕೃವ್ತವಾದ ಮಂಜೂರಾತಿಗೆ ಬಳಪಟ್ಟು ಹರಾಜು ನಡಿಸತಕ್ಕ ಆಫಿಸರರು ಯಾವದಾದ್ದರೂ ವಿಶೇಷ ಸಂದರ್ಭದಲ್ಲಿ ದರಖಾಸ್ತುಗಳ ಮೂಲಕವೇ ಆಗಲಿ ಖಾಸಗೀ ಏರ್ಪಾಟುಗಳ ಮೂಲಕವೇ ಆಗಲಿ ಅಂಗಡಿಗಳನ್ನು ಮಾಡಬಹುದು. ಸರ್ಕಾರದ ಸವಾಲನ್ನು ತಮ್ಮ ಇಷ್ಟಾನುಸಾರ ಕೃಮ್ಮಾಮಾಡಬಹುದು. ಲೈಸೆನ್ಸಿದಾರನು ಯಾವದಾದರೂ ತಕ್ಸೀರಿಗಾಗಿ ಕ್ರಿಮಿನಲ್ಲಿ ಕೋರ್ಟ್‌ನಲ್ಲಿ ದರ್ಯಾಫ್ತಿಯಾಗಿ ತಪ್ಪು ಸಾಬೀತಾಗಿರುವದರಿಂದಲೂ ಅಥವಾ ಲೈಸೆನ್ಸಿನ ಯಾ ಎಕ್ಸೈಜ್ ರೆಗ್ಯುಲೇಷನ್ ಯಾ ಓಪಿಯಂ ಆಕ್ಟಿನ ಷರತ್ತುಗಳಿಗನುಸಾರವಾಗಿ ನಡೆಯದೇ ಇದ್ದ ತಪ್ಪಿತಸ್ಥನಾಗಿರುವ ಕಾರಣದಿಂದ ಲೈಸೆನ್ಸಿನ ಹಿಡುವಳಿದಾರನಾಗಿರಲು ಯೋಗ್ಯನಲ್ಲವೆಂಬದಾರವೇಲೂ ಯಾ ನಾದಾರೀ ಮನುಷ್ಯನೆಂಬದರವೇಲೂ ಅಥವಾ ಸರ್ಕಾರದ ಪ್ರಯೋಜನಕ್ಕೆ ಕುಂದಕ್ಕವಾಗತಕ್ಕ ಏರ್ಪಾಟುಗಳನ್ನು ನಿಲ್ಲಿಸಬೇಕೆಂಬದರವೇಲೂ ಅಥವಾ ಇನ್ಯಾವ ಇತರ ಯುಕ್ತವಾದ ಕಾರಣಕ್ಕಾಗಿಯೂ ಹರಾಜು ನಡಿಸತಕ್ಕ ಆಫಿಸರರು ಆವರಿಗೆ ಯುಕ್ತ ತೋರಿದಲ್ಲಿ ಯಾವ ಮನುಷ್ಯನ ಸವಾಲನ್ನಾದರೂ ಕಾರಣವನ್ನು ತಿಳಿಸದೇನೆ ತಿರಸ್ಕರಿಸಬಹುದು.